Reg. No. | | | | | | | | |

**BCMKAL 103**

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ನವಂಬರ್/ಡಿಸೆಂಬರ್ 2015
## (2013-14 ಬ್ಯಾಚ್ ಮತ್ತು ಮುಂದಿನವರಿಗಾಗಿನ ಸ್ಕೀಂ )
## ಕನ್ನಡ ಭಾಷಾ ಪತ್ರಿಕೆ – 1

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

### ಭಾಗ – 1
### (ಕಾವ್ಯ)

I. ಅ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಚಂದ್ರಹಾಸ ಮತ್ತು ವಿಷಯೆಯ ಮದುವೆಯ ಪ್ರಸಂಗವನ್ನು ಕುರಿತು ಬರೆಯಿರಿ.

2) 'ಬಸವಣ್ಣ ಒಬ್ಬ ಪರಿಶುದ್ಧ ಶರಣ' ಎಂಬುದನ್ನು ಆತನ ಆತ್ಮವಿಮರ್ಶೆಯ ವಚನಗಳ ಮೂಲಕ ಹೇಗೆ ಕಂಡುಕೊಳ್ಳಬಹುದು ? ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ನಿರೂಪಕ ಹಾಗೂ ರಾಮಯ್ಯ ಕಾವೇರಿ ನದಿಗೆ ಸ್ನಾನಕ್ಕೆಂದು ಹೋದಾಗ ನಡೆದ ಘಟನೆ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

2) ಮಾಸ್ತಿಯವರ ವ್ಯಕ್ತಿ ಚಿತ್ರಣ ನಿಸಾರ್ ಅಹಮ್ಮದ್ ಅವರ ಕವಿತೆಯಲ್ಲಿ ವ್ಯಕ್ತಗೊಂಡ ಬಗೆ ಹೇಗೆ ?

ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×3=6)**

1) ಷಟ್ಪದಿ

2) ವಚನಗಳು

3) ಸಿದ್ಧಲಿಂಗಯ್ಯ

II. ಅ) ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ನನ್ನ ಸೀರೆಯ ಸೆರಗು ಮರೆ ಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು ?
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮರೆವ ಜನಗಳ ಮೇಲೆ ಚೆಲ್ಲಲೇನು.

P.T.O.

2) ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಭ ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯ
ಕೂಡಲಸಂಗಮ ದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಆ) ಕೆಳಗಿನ ವಾಕ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×3=6)**

1) ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕೆ ಆಸೆ ಪಡುವಂತೆ

2) ಉಲ್ಲಂಘಿಸುವವರುಂಟೆ ವಿಧಿಕೃತವನು

3) ಗೆಲ್ಲ ಬಯಸದವನಿಗೆ ಸೋಲೇ ಇಲ್ಲ

III. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(5×1=5)**

1) 'ಜೈಮಿನಿ ಭಾರತ'ದ ಕರ್ತೃ ಯಾರು ?

2) ನಿರೂಪಕ ಮತ್ತು ರಾಮಯ್ಯ ಸ್ನಾನಕ್ಕೆಂದು ಯಾವ ನದಿಗೆ ಹೋದರು ?

3) 'ಕೃಷ್ಣ ಶಕ್ತಿ' ಯಾರು ಬರೆದ ಕವನ ?

4) ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು ?

5) ಕೆಂಪೇಗೌಡ ಯಾರ ಬಳಿಯಲ್ಲಿ ಜೀತಕ್ಕಿದ್ದನು ?

## ಭಾಗ – 2
## (ಗದ್ಯ)

IV. ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಯೂ ಅಗತ್ಯ ಎಂಬುದನ್ನು ನಾಗೇಶ ಹೆಗಡೆಯವರ ಲೇಖನ ಹೇಗೆ ಅರ್ಥೈಸುತ್ತದೆ ? ವಿವರಿಸಿರಿ.

2) ಮಾನವನಿಗೆ ದೇವರ ಪರಿಕಲ್ಪನೆ ಹೇಗೆ ಬಂದಿರಬಹುದೆಂಬುದನ್ನು ಲೇಖಕರು ಚರ್ಚಿಸಿದ್ದಾರೆ ? ವಿವರಿಸಿರಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) 'ಮನುಷ್ಯನ ಬಾಲ್ಯದ ದಿನಗಳು ಆತನ ವ್ಯಕ್ತಿತ್ವದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ' – 'ಪ್ರತೀಕಾರ' ಕತೆಯ ಹಿನ್ನೆಲೆಯಲ್ಲಿ ಈ ಮಾತನ್ನು ಸಮರ್ಥಿಸಿ.

2) ಜಲಜ ಚಿಕ್ಕಿಯ ವ್ಯಕ್ತಿತ್ವ ಮಿತ್ರಾವೆಂಕಟ್ರಾಜ್ ಅವರ ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ? ತಿಳಿಸಿ.

ಇ) ಯಾವುದಾದರೂ **ಒಂದನ್ನು** ಸಂಕ್ಷಿಪ್ತವಾಗಿ ವಿವರಿಸಿ. **(1×5=5)**

1) ನಂಬಿಕೆಗಳು ಮತ್ತು ಆಚರಣೆಗಳು

2) ಧರ್ಮ ಮತ್ತು ಸಮಾಜ

V. ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) 'ಆಂಜನೇಯನ ವಿಗ್ರಹವನ್ನು ಮುಟ್ಟಲು ನನಗೆ ಹಿಂದೆಂದೂ ಅವಕಾಶ ಸಿಕ್ಕಿರಲಿಲ್ಲ. ಮುಂದೆ ದೇವಸ್ಥಾನ ಸಿದ್ಧವಾದ ಮೇಲಂತೂ ಈ ಅವಕಾಶ ಶಾಶ್ವತವಾಗಿ ಇಲ್ಲವಾಗುತ್ತಿತ್ತು' – ಲೇಖಕರ ಮಾತಿನಲ್ಲಿ ವ್ಯಕ್ತವಾಗುವ ನೋವಿನ ಧ್ವನಿಯನ್ನು ವಿವರಿಸಿರಿ.

2) ''ಅರೆ.. ನೋಂಬುಂದ್ರೆ ಇದೇ ಏನಮ್ಮಾ.. ? ಹೀಗೆ ನಾವು ತುಂಬಾ ಸಲ ಇದ್ದೆವೆಲ್ಲಾ.. !'' ಅದ್ದುವಿನ ಈ ಮಾತು ಬಡವ–ಶ್ರೀಮಂತರ ನಡುವಿನ ಧಾರ್ಮಿಕ ಆಚರಣೆಯ ವ್ಯತ್ಯಾಸವನ್ನು ಹೇಗೆ ತಿಳಿಸುತ್ತದೆ ?

3) ''ವೈಯಕ್ತಿಕ ಮಟ್ಟದಲ್ಲಿ ಪರಸರ ಧ್ವಂಸ ಮಾಡುವವರಿಗಾಗಿ ಪ್ರತ್ಯೇಕ ಪಾಠದ ವ್ಯವಸ್ಥೆ ಜಾರಿಗೆ ಬರಬೇಕು''– ಲೇಖಕರ ಈ ಮಾತನ್ನು ಸಮರ್ಥಿಸಿ ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(4×1=4)**

1) ಮುಸ್ಲಿಂ ಸಮಾಜದವರು ಯಾವ ಹಬ್ಬದಂದು 'ನೋಂಬು'' ಆಚರಿಸುತ್ತಾರೆ ?

2) ಕಪಿಲ್ ಭಟ್ಟಾಚಾರ್ಯ ಯಾರು ?

3) ''ತುತ್ತೂರಿ'' ಪತ್ರಿಕೆಯ ಸಂಪಾದಕ ಯಾರು ?

4) ಜಲಜ ಚಿಕ್ಕಿಗೆ ಚಿಕ್ಕಪ್ಪಯ್ಯನ ಒಸಗೆಯನ್ನು ಒಯ್ದವರು ಯಾರು ?

## ಭಾಗ – 3

## (ಕ್ರಿಯಾತ್ಮಕ ಕನ್ನಡ)

VII. **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ವಿವರಿಸಿರಿ.

2) ಆದೇಶ ಪತ್ರ ಎಂದರೇನು ? ಒಂದು ಮಾದರಿ ಪತ್ರವನ್ನು ರಚಿಸಿ, ಅದರ ಪ್ರಮುಖ ಅಂಶಗಳನ್ನು ವಿವರಿಸಿರಿ.

VIII. **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) ಭೂಮಿಯ ವಿವಿಧ ಪ್ರಭೇದಗಳನ್ನು ವಿವರಿಸಿರಿ.

2) ಭೂ ಪರಿವರ್ತನೆ ಎಂದರೇನು ? ಇದಕ್ಕೆ ಸಂಬಂಧಿಸಿದ ನಿಯಮಗಳನ್ನು ತಿಳಿಸಿ.

IX. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) 'ಆರ್.ಟಿ.ಸಿ.' ಎಂಬುದಕ್ಕೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ ?

2) ಆಕ್ಷೇಪಣಾ ಪತ್ರ ಎಂದರೇನು ?